ಯುವಕರ ಪ್ರತಿಭೆಗೆ ಪ್ರೋತ್ಸಾಹಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ.

380 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಯುವಕರ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಸರ್ಕಾರದವರು ಕ್ರೀಡೆ, ವ್ಯಾಯಾಮ ಶಾಲೆಗಳಿಗೆ ಪ್ರೋತ್ಸಾಹಿಸಲು ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವರು. (ಜಿಲ್ಲಾವಾರು ವಿವರಗಳನ್ನು ನೀಡುವುದು) ?

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ವ್ಯಾಯಾಮ ಶಾಲೆಗಳಿಗೆ ಪ್ರೋತ್ಸಾಹಿಸಲು ಜಿಲ್ಲಾ ಪಂಚಾಯತ್ ವಲಯ ಯೋಜನೆ ಲಿಡಿಯಲ್ಲಿ ಗ್ರಾಮ ಗರಡಿ ಮನೆ ನಿರ್ಮಾಣ ಮತ್ತು ಅಂಗಸಾಧಕರಿಗೆ ವಿದ್ಯಾರ್ಥಿ ವೇತನ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ರಾಜ್ಯದ ಎಲ್ಲಾ 20 ಜಿಲ್ಲೆಗಳಿಗೂ ಸೇರಿದಂತೆ ಒಟ್ಟು ರೂ.20.61ಲಕ್ಷ ಹಣವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ - 1 ರಲ್ಲಿ ಲಗತ್ತಿಸಲಾಗಿದೆ.

ರಾಜ್ಯದಲ್ಲಿ ಯುವ ಪ್ರತಿಭೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಸರ್ಕಾರವು ಕ್ರೀಡಾಶಾಲೆ, ಕ್ರೀಡಾನಿಲಯಗಳನ್ನು ತೆರೆದಿದೆ. ರಾಜ್ಯದಲ್ಲಿ ಬೆಂಗಳೂರಿನ ವಿದ್ಯಾನಗರ ಮಡಿಕೇರಿಯ ಕೂಡಿಗೆಯಲ್ಲಿ ಕ್ರೀಡಾ ಶಾಲೆಗಳಿವೆ. ಮೈಸೂರು, ಬೆಂಗಳೂರು, ಗುಲ್ಬರ್ಗಾ, ಬೆಳಗಾಂ, ಬಿಜಾಪುರ ಹಾಗೂ ಚಿತ್ರದುರ್ಗದಲ್ಲಿ ಕ್ರೀಡಾನಿಲಯಗಳನ್ನು ನಡೆಸಲಾಗುತ್ತಿದೆ. ಈ ಕ್ರೀಡಾ ಶಾಲೆ, ಕ್ರೀಡಾ ನಿಲಯಗಳಲ್ಲಿ ಸುಮಾರು 350 ಕ್ರೀಡಾಪಟುಗಳು ತರಬೇತಿ ಪಡೆಯುತ್ತಿದ್ದಾರೆ. ಈ ಯೋಜನೆಯಡಿ ಕ್ರೀಡಾ ಪ್ರತಿಭೆಗಳಿಗೆ ಉಚಿತ ಊಟ ವಸತಿ, ಕ್ರೀಡಾತರಬೇತಿ ಕ್ರೀಡಾಗಂಟು ಹಾಗೂ ವಿದ್ಯಾಭ್ಯಾಸ ಸೌಲಭ್ಯಗಳನ್ನು ಸಹ ನೀಡಲಾಗುತ್ತಿದೆ.

ಅನುಬಂಧ - 1

ಕ್ರಮ ಸಂಖ್ಯೆ	ಜಿಲ್ಲೆ	ಗ್ರಾಮಗರಡಿ ಮನೆ ನಿರ್ಮಾಣ ಮತ್ತು ಅಂಗಸಾಧಕರಿಗೆ ವಿದ್ಯಾರ್ಥಿ ವೇತನ
1.	ಬೆಂಗಳೂರು ನಗರ	ರೂ. 1.20 ಲಕ್ಷ
2.	ಬೆಂಗಳೂರು ಉತ್ತರ	ರೂ. 0.50 ಲಕ್ಷ
3.	ಚಿತ್ರದುರ್ಗ	ರೂ. 1.20 ಲಕ್ಷ
4.	ಕೋಲಾರ	ರೂ. 0.45 ಲಕ್ಷ
5.	ಶಿವಮೊಗ್ಗ	ರೂ. 0.75 ಲಕ್ಷ
6.	ತುಮಕೂರು	ರೂ. 0.50 ಲಕ್ಷ
7.	ಮೈಸೂರು	ರೂ. 1.10 ಲಕ್ಷ

8.	ಚಿಕ್ಕಮಗಳೂರು	ರೂ. 1.70 ಲಕ್ಷ
9.	ದಕ್ಷಿಣ ಕನ್ನಡ	ರೂ. 1.20 ಲಕ್ಷ
10.	ಹಾಸನ	ರೂ. 1.65 ಲಕ್ಷ
11.	ಕೊಡಗು	ರೂ. 1.30 ಲಕ್ಷ
12.	ಮಂಡ್ಯ	ರೂ. 1.30 ಲಕ್ಷ
13.	ಬೆಳಗಾಂ	ರೂ. 2.50 ಲಕ್ಷ
14.	ಬಿಜಾಪುರ	ರೂ. 1.20 ಲಕ್ಷ
15.	ಧಾರವಾಡ	ರೂ. 1.00 ಲಕ್ಷ
16.	ಉತ್ತರ ಕನ್ನಡ	ರೂ. 1.10 ಲಕ್ಷ
17.	ಗುಲ್ಬರ್ಗಾ	ರೂ. 0.50 ಲಕ್ಷ
18.	ಬಳ್ಳಾರಿ	ರೂ. 1.96 ಲಕ್ಷ
19.	ಬೀದರ್	ರೂ. -
20.	ರಾಯಚೂರು	ರೂ. 0.50 ಲಕ್ಷ

ಶಾಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ

383 - ಶ್ರೀ ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯ ಸರ್ಕಾರವು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಯಾವ ಯಾವ ಜಿಲ್ಲೆಗಳಲ್ಲಿ ಮಾಡಿದೆ?*

ಆ) *ಪ್ರಸಕ್ತ ಸೌಲಭ್ಯಗಳಿಂದ ಕೆಲವು ಗ್ರಾಮಾಂತರ ಪ್ರದೇಶಗಳ ಶಾಲೆಗಳು ವಂಚಿರಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕಾರಣಗಳೇನು?*

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 1) ಬೆಂಗಳೂರು (ಗ್ರಾ) ಜಿಲ್ಲೆ 1. ರಾಮನಗರ ತಾ.
2. ದೊಡ್ಡಬಳ್ಳಾಪುರ ತಾ.

2) ಚಿಕ್ಕಮಗಳೂರು ಜಿಲ್ಲೆ 1. ಕೊಪ್ಪ ತಾ.
2. ನರಸಿಂಹರಾಜಪುರ ತಾ.
3. ಶೃಂಗೇರಿ ತಾ.
4. ಮೂಡಿಗೆರೆ ತಾ.